ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ಸಂಖ್ಯೆ:ಹೆಚ್.ಆರ್.ಎಂ.ಎಸ್/ಸುತ್ತೋಲೆ01/2016-17 ದಿನಾಂಕ:01-09-2016

**:ಜ್ಞಾಪನಾ:**

**ವಿಷಯ:** ಹೆಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ಎಲ್ಲಾ ಡಿಡಿಓಗಳು ತಮ್ಮ ಅಧಿಕಾರಿ/ಶಿಕ್ಷಕರು/ಸಿಬ್ಬಂದಿಗಳ ತಪ್ಪಾದ ಮಾಹಿತಿಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆ.

**ಉಲ್ಲೇಖ:** ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಹೆಚ್‌ಆರ್‌ಎಂಎಸ್/2015-16 ದಿನಾಂಕ:28/09/2015.

-&&&-

ಹೆಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ಎಲ್ಲಾ ಸರ್ಕಾರಿ ನೌಕರರ ಸೇವಾ ವಿವರಗಳನ್ನು ದಾಖಲಿಸಿ, ವೇತನವನ್ನು ಆಗಸ್ಟ್-2008 ರಿಂದ ಸೆಳೆಯುತ್ತಿರುವುದು ಸರಿಯಷ್ಟೆ. ಈಗಾಗಲೇ 8 ವರ್ಷಗಳು ಕಳೆದರೂ ಡಿಡಿಓ ಗಳಿಂದ ನೌಕರರ ಸೇವಾ ವಿವರಗಳನ್ನು ಸರಿಪಡಿಸುವಂತೆ ಅನೇಕ ಪತ್ರಗಳು/ಆನ್‌ಲೈನ್ ರಿಕ್ವೆಸ್ಟ್‌ಗಳು ಬರುತ್ತಿರುವುದು ವಿಷಾದನೀಯ. ಇದಕ್ಕೆ ಮೂಲಕಾರಣ ಡಿಡಿಓಗಳು ತಮ್ಮ ಅಧಿಕಾರಿ/ಶಿಕ್ಷಕರು/ಸಿಬ್ಬಂದಿಗಳ ಸೇವಾ ವಿವರಗಳನ್ನು ಹೆಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ತಪ್ಪಾಗಿ ಅಳವಡಿಸಿಕೊಂಡಿರುವುದು ಅಥವಾ ಅಳವಡಿಸದೇ ಇರುವುದಾಗಿದೆ.

ಆದ್ದರಿಂದ ಡಿಡಿಓಗಳು ಈ ತಕ್ಷಣ ನೌಕರರ ನಿಖರವಾದ ಸೇವಾ ವಿವರಗಳನ್ನು ಜ್ಞಾಪನಕ್ಕೆ ಲಗತ್ತಿಸಿರುವ ಅನುಬಂಧ-1 ರಂತೆ ಅಳವಡಿಸಿ ವೇತನ ವಿಳಂಬವಾಗದಂತೆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು. ಹೆಚ್‌ಆರ್‌ಎಂಎಸ್ Version-2.0 ಪ್ರಗತಿಯಲ್ಲಿದ್ದು ತಪ್ಪದೇ ಅನುಬಂಧದಲ್ಲಿನ ಎಲ್ಲಾ ಅಂಶಗಳನ್ನು ಸರಿಯಾಗಿ ಹೆಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ದಾಖಲಿಸಿ ಸಮಸ್ಯೆಗಳಿಗೆ ಅವಕಾಶ ನೀಡಬಾರದೆಂದು ತಿಳಿಸಿದೆ.

ಉಲ್ಲೇಖಿತ ಪತ್ರದಲ್ಲಿ ಈಗಾಗಲೇ ಸೂಚನೆಗಳನ್ನು ನೀಡಲಾಗಿದ್ದರೂ ವೇತನ ಸೆಳೆಯುವ ಅಧಿಕಾರಿಗಳು ಇದುವರೆಗೂ ಯಾವುದೇ ಕ್ರಮವಹಿಸದೇ ಇರುವುದು ಕಂಡುಬಂದಿರುತ್ತದೆ. ದಿನಾಂಕ 24/8/2016 ರಂದು ಹೆಚ್‌ಆರ್‌ಎಂಎಸ್ ಯೋಜನಾಧಿಕಾರಿಗಳು ಈ ಬಗ್ಗೆ ಚರ್ಚಿಸಿ ಹಲವಾರು ದೋಷಗಳನ್ನು ಸರಿಪಡಿಸಲು ತಿಳಿಸಿರುತ್ತಾರೆ.

ನೌಕರರ ಹೆಸರು, ಪದನಾಮ, ಗ್ರೂಪ್, ವೇತನ ಶ್ರೇಣಿ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವರ್ಗಾವಣೆ, ಬಡ್ತಿ, ರಜೆ ವಿವರ, ಮೊದಲಾದ ಸೇವಾ ವಿವರಗಳನ್ನು ಡಿಡಿಓಗಳು ಸರಿಪಡಿಸಬೇಕಾಗಿರುತ್ತದೆ.

ಅಲ್ಲದೆ, ಅನೇಕ ಡಿಡಿಓಗಳಿಂದ ಪೇಬಿಲ್ ರಿವರ್ಟ್ ರಿಕ್ವೆಸ್ಟ್ ಹೆಚ್ಚಾಗಿ ಬರುತ್ತಿದ್ದು, ಇದಕ್ಕೆ ಮೂಲ ಕಾರಣ ಟೋಕನ್ ಸಂಖ್ಯೆ ತಪ್ಪಾಗಿರುವುದು ಮತ್ತು ಬಿಲ್ ತಪ್ಪಾಗಿ ಜನರೇಟ್ ಆಗಿರುವುದಾಗಿದೆ. ಬಿಲ್ ಅಪ್ರೂವ್ ಮಾಡುವ ಮೊದಲು ಡ್ರಾಫ್ಟ್ ಬಿಲ್ಲನ್ನು ಸರಿಯಾಗಿ ಪರಿಶೀಲಿಸಿ ಮತ್ತು ಟೋಕನ್ ಸಂಖ್ಯೆಯನ್ನು ಖಚಿತಪಡಿಸಿಕೊಂಡು ನಂತರ ಬಿಲ್ ಅಪ್ರೂವ್ ಮಾಡಿಕೊಳ್ಳಲು ತಿಳಿಸಿದೆ. ಇನ್ನು ಮುಂದೆ ಸಕಾರಣವಿಲ್ಲದೆ ಬಿಲ್ ರಿವರ್ಟ್‌ಗೆ ರಿಕ್ವೆಸ್ಟ್ ನೀಡಿದಲ್ಲಿ ಪುರಸ್ಕರಿಸಲಾಗುವುದಿಲ್ಲ.

ಒಂದು ವೇಳೆ ಇಂತಹ ದೋಷಗಳಿಂದ ವೇತನ ಸೆಳೆಯಲು ವಿಳಂಬವಾದಲ್ಲಿ ಡಿಡಿಓಗಳೇ ನೇರ ಹೊಣೆಗಾರರಾಗಿರುವುದರಿಂದ, ಡಿಡಿಓಗಳೇ ವೈಯಕ್ತಿಕ ಗಮನಹರಿಸಿ ಹೆಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ಮಾಹಿತಿ ಸರಿಪಡಿಸಿಕೊಳ್ಳಲು ಮತ್ತೊಮ್ಮೆ ಸೂಚಿಸಲಾಗಿದೆ.

ಸೌಜನ್ಯ[ಭಾ.ಆ.ಸೇ]
ಆಯುಕ್ತರು

**ಇವರಿಗೆ:**

1) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
2) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ.
3) ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
4) ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಡಿಡಿಓಗಳಿಗೆ(ವೇತನ ಬಟವಾಡೆ ಅಧಿಕಾರಿಗಳಿಗೆ) ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರ ಮುಖಾಂತರ.
5) ಕಛೇರಿ ಪ್ರತಿ.

| ಅನುಬಂಧ-1 | |
|---|---|
| 1 | Correct Name as present in SSLC Marks card |
| 2 | Correct First KGID Number |
| 3 | Correct Address, Pin code & Phone Number |
| 4 | Correct Date of Birth |
| 5 | Correct Date of joining |
| 6 | Correct Date of Increment |
| 7 | Correct pay scale |
| 8 | Correct Designation |
| 9 | Correct Group |
| 10 | Correct PAN number |
| 11 | Correct Place Of Work |
| 12 | Correct Home Town details |
| 13 | Correct Nominee details |
| 14 | Correct Family & dependent details |
| 15 | Correct Increment details |
| 16 | Correct Pay Fixation details |
| 17 | Correct Probationary details |
| 18 | Correct Transfer details |
| 19 | Correct promotion details |
| 20 | Correct Leave balance details |
| 21 | Correct Leave details |
| 22 | Correct Leave encashment details |
| 23 | Correct Training details |
| 24 | Correct Marital status details |